
## ಮದರಂಗಿ ಪ್ರವಾಸ!

ಪ್ಯಾಕೇಜ್ ಟೂರ್‌ಗಳನ್ನು ಏರ್ಪಡಿಸುವ ಸಂಸ್ಥೆಯೊಂದು ಒಂದೇ ಸಮಯದಲ್ಲಿ ಎರಡು ಯೋಜನೆಗಳ ಮೂಲಕ ಯುರೋಪ್ ಪ್ರವಾಸ ಏರ್ಪಡಿಸಿತ್ತು. ಹಿರಿಯ ನಾಗರಿಕರಿಗಾಗಿ 'ಸೀನಿಯರ್ ಸಿಟಿಜನ್ಸ್ ಔಟಿಂಗ್' ಯೋಜನೆ, ನವವಿವಾಹಿತರಿಗೆ 'ಹನಿಮೂನ್ ಕಪಲ್ಸ್' ಯೋಜನೆ. 'ಸೀನಿಯರ್ ಸಿಟಿಜನ್ಸ್ ಔಟಿಂಗ್' ಗುಂಪಿನಲ್ಲಿ ಪತ್ನಿಯೊಂದಿಗೆ ನಾನೂ ಹಾಜರಿದ್ದೆ. ಮುಂಬೈ ವಿಮಾನ ನಿಲ್ದಾಣದಲ್ಲಿ ನಮ್ಮ ಗುಂಪುಗಳನ್ನು ಪ್ರತ್ಯೇಕಿಸುತ್ತ ಟೂರ್ ಮ್ಯಾನೇಜರ್, ‘ಕೈಗಳಿಗೆ ಮದರಂಗಿ ಹಾಕಿಕೊಂಡವರು ಈ ಬದಿಗೆ ಬನ್ನಿ ಮತ್ತು ತಲೆಕೂದಲಿಗೆ ಮದರಂಗಿ ಹಾಕಿಕೊಂಡವರು ಆ ಬದಿಗೆ ಹೋಗಿ’ ಎಂದು ಹೇಳುತ್ತಿದ್ದಂತೆ ನಾವೆಲ್ಲ ನಕ್ಕಿದ್ದೇ ನಕ್ಕಿದ್ದು!

**ರಮಣ್ ಶೆಟ್ಟಿ ರೆಂಜಾಳ್**





## ಬ್ಲೌಸ್ ಪೀಸ್

ಮನೆಗೆ ಹೆಣ್ಣುಮಕ್ಕಳು ಬಂದಾಗ ಕುಂಕುಮದ ಜೊತೆ ಹಣ್ಣು, ಬ್ಲೌಸ್ ಪೀಸ್ ಕೊಡುವುದು ಸಂಪ್ರದಾಯ. ಇನ್ನು ಹಬ್ಬ ಅಂದ್ರೆ ಕೇಳೋದೇ ಬೇಡ. ಮೊನ್ನೆ ಸಂಕ್ರಾಂತಿಯಂದು ಸಂಜೆ ನನ್ನ ಸ್ನೇಹಿತೆ ಉಮಾ ಬಂದು ಬಣ್ಣದ ಪ್ಯಾಕೇಟಲ್ಲಿ ಎಳ್ಳು ಬೆಲ್ಲ ಕೊಟ್ಟರು. ನಾನು ಪ್ರತಿಯಾಗಿ ಅವರಿಗೆ ಎಳ್ಳು ಬೆಲ್ಲದ ಜೊತೆಗೆ ಹಣ್ಣು, ಒಂದು ಬ್ಲೌಸ್ ಪೀಸ್ ಕೊಟ್ಟೆ. ಅವರು ಅಲ್ಲಿಂದ ನೇರ ನನ್ನ ಇನ್ನೊಬ್ಬ ಸ್ನೇಹಿತೆ ಪ್ರಭಾ ಮನೆಗೆ ಹೋದರು. ಸ್ವಲ್ಪ ಸಮಯಕ್ಕೇ ಪ್ರಭಾ ನಮ್ಮ ಮನೆಗೆ ಬಂದರು. ಕುಂಕುಮ ಕೊಟ್ಟು, ಉಮಾ ಅವರ ಮನೆಯ ಅದೇ ಬಣ್ಣದ ಎಳ್ಳಿನ ಪ್ಯಾಕೇಟ್, ನಮ್ಮ ಮನೆಯ ಬ್ಲೌಸ್ ಪೀಸ್ (ಉಮಾಗೆ ಕೊಟ್ಟಿದ್ದು) ಅವರ ಮನೆಯ ಎರಡು ಬಾಳೆಹಣ್ಣನ್ನು ಬೀರಿ ಸಂಕ್ರಾಂತಿ ಮೆರೆದರು. ನಮ್ಮ ಮನೆಯ ಬ್ಲೌಸ್ ಪೀಸ್ ಹಿಂತಿರುಗಿ ನನಗೇ ಬಂದದ್ದು ನೋಡಿ ನಗು ಬಂತು.

**ಸುಮಾ ಕಳಸಾಪುರ**